# ಭಾಷೆಯ ಆರ್ದ್ರತೆ, ಸಂವೇದನೆಗೆ ಕೂಗುಮಾರಿತನ ಅಪಾಯ

ಬಾಲಕನೊಬ್ಬನ ತಪ್ಪು ಉಚ್ಚಾರವನ್ನು ವಿಡಿಯೊ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದ ಶಿಕ್ಷಕರೊಬ್ಬರ ವಿರುದ್ಧ ಶಿಕ್ಷಣ ಇಲಾಖೆ ಕ್ರಮ ಕೈಗೊಂಡಿದೆ. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಸುರೇಶ್ ಕುಮಾರ್ ಅವರ ಖುದ್ದು ಆಸಕ್ತಿಯಿಂದಾಗಿ ಈ ಪ್ರಕರಣ ಚರ್ಚೆಗೆ ಬಂದಿದ್ದು, ತಪ್ಪಿತಸ್ಥ ಶಿಕ್ಷಕರಿಗೆ ಬಿಸಿಮುಟ್ಟುವಂತಾಗಿದೆ. ಮುಗ್ಧ ಮಗುವಿನ ಆತ್ಮವಿಶ್ವಾಸವನ್ನು ಗಾಸಿಗೊಳಿಸುವ ಶಿಕ್ಷಕನ ನಡವಳಿಕೆಯನ್ನು ಸಚಿವರು ಸಣ್ಣ ಘಟನೆಯೆಂದು ಭಾವಿಸದೆ ಗಂಭೀರವಾಗಿ ಪರಿಗಣಿಸಿರುವುದು ಸ್ವಾಗತಾರ್ಹ. ‘ಮಕ್ಕಳು ತಪ್ಪು ಉಚ್ಚಾರ ಮಾಡುವುದು ಸಹಜ. ನಿರಂತರ ಕಲಿಕೆಯ ಮೂಲಕ ಉಚ್ಚಾರಣೆ ಸರಿಯಾಗುತ್ತದೆ. ತಪ್ಪು ಉಚ್ಚಾರವನ್ನು ವಿಡಿಯೊ ಮಾಡಿ ವೈರಲ್ ಮಾಡಿದ್ದು ತಪ್ಪು. ಶಿಕ್ಷಕರು ಮಕ್ಕಳಿಗೆ ಸರಿಯಾಗಿ ಉಚ್ಚಾರ ಕಲಿಸುವುದನ್ನು ಬಿಟ್ಟು, ತಪ್ಪನ್ನು ದೊಡ್ಡ ಅಪರಾಧವೆಂಬಂತೆ ಬಿಂಬಿಸುವುದು’ ಸರಿಯಲ್ಲ ಎನ್ನುವ ಸಚಿವರ ಮಾತು, ಶಿಕ್ಷಕರು ಮಕ್ಕಳೊಂದಿಗೆ ಹೇಗೆ ನಡೆದುಕೊಳ್ಳಬೇಕು ಎನ್ನುವುದಕ್ಕೆ ಮಾರ್ಗದರ್ಶಿ ಸೂತ್ರದಂತಿದೆ.

ಶೈಕ್ಷಣಿಕ ವ್ಯವಸ್ಥೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರು ಅತ್ಯಂತ ಮುಖ್ಯವಾದ ಪಾತ್ರ. ಮಕ್ಕಳ ಸೂಕ್ಷ್ಮ ಮನಸ್ಸಿನೊಂದಿಗೆ ವ್ಯವಹರಿಸಬೇಕಾದ ಅವರಿಗೆ ಸಾವಧಾನ, ತಾಯಿಗುಣ ಇರುವುದು ಅತ್ಯಂತ ಅಗತ್ಯ. ಅನೇಕ ಸಂದರ್ಭಗಳಲ್ಲಿ ಮೇಷ್ಟ್ರು ಕೂಡ ಮಗುವಾಗಿ ಕಲಿಸಬೇಕಾಗುತ್ತದೆ, ಕಲಿಯಬೇಕಾಗುತ್ತದೆ. ಉತ್ತಮ ಶಿಕ್ಷಕನಿಗೆ ಚತುರೋಪಾಯಗಳಲ್ಲಿ ಸಾಮ–ದಾನಗಳು ಅನುಸರಣೀಯವೇ ಹೊರತು, ಭೇದ ಹಾಗೂ ದಂಡಗಳಲ್ಲ. ಪ್ರೇಮದಿಂದ, ಸ್ನೇಹದಿಂದ ಮಕ್ಕಳನ್ನು ಗೆಲ್ಲುವ ಮಾರ್ಗವನ್ನು ಬೋಧಕರು ಅನುಸರಿಸುವುದು ಅಗತ್ಯ ಹಾಗೂ ಬಹುಸಂಖ್ಯೆಯ ಶಿಕ್ಷಕರು ಈ ಮಾರ್ಗದ ಮೂಲಕವೇ ವಿದ್ಯಾರ್ಥಿಸ್ನೇಹಿಗಳಾಗಿ ಗುರ್ತಿಸಿಕೊಂಡಿದ್ದಾರೆ. ಆದರೆ, ಶಿಕ್ಷಕನ ಜವಾಬ್ದಾರಿಗಳಲ್ಲಿ ಮಕ್ಕಳನ್ನು ಶಿಕ್ಷಿಸುವುದೂ ಒಂದು ಎಂದು ಭಾವಿಸಿರುವ ಕೆಲವು ಶಿಕ್ಷಕರೂ ಇದ್ದಾರೆ. ಅಂಥ ಶಿಕ್ಷಕರು ಮಕ್ಕಳನ್ನು ದಂಡಿಸುವುದನ್ನು ದೊಡ್ಡಸ್ತಿಕೆಯೆಂದು ಭಾವಿಸುತ್ತಾರೆ. ದಂಡನೆ ಎನ್ನುವುದು ಹೊಡೆತದ ರೂಪದಲ್ಲಷ್ಟೇ ಅಲ್ಲ, ಮಾತಿನ ವೇಷದಲ್ಲೂ ಇರಬಹುದು. ಬಿರುಸುಮಾತು ಹಾಗೂ ವ್ಯಂಗ್ಯ ಮನಸ್ಸಿಗೆ ಪೆಟ್ಟುನೀಡುತ್ತವೆ, ಆತ್ಮವಿಶ್ವಾಸವನ್ನು ಕುಗ್ಗಿಸುತ್ತವೆ.

ವ್ಯಕ್ತಿಯನ್ನು ಅವಮಾನಿಸುವ ಮಾರ್ಗವಾಗಿ ಭಾಷೆಯನ್ನು ಬಳಸುವ ಘಟನೆಗಳಿಗೆ ನಾವೆಲ್ಲರೂ ಒಂದಲ್ಲಾ ಒಂದು ಸಂದರ್ಭದಲ್ಲಿ ಗುರಿಯಾಗಿಯೇ ಇರುತ್ತೇವೆ. ಬೈಗುಳದ ಮೂಲಕ ವ್ಯಕ್ತಿಯನ್ನು ಅವಮಾನಿಸುವುದು ಒಂದು ಬಗೆಯಾದರೆ, ತಪ್ಪು ಉಚ್ಚಾರಣೆಯನ್ನು ಅವಹೇಳನ ಮಾಡುವುದು ಅವಮಾನಿಸುವ ಮತ್ತೊಂದು ಮಾರ್ಗ. ಇತ್ತೀಚಿನ ವರ್ಷಗಳಲ್ಲಂತೂ ಸಿನಿಮಾ ಹಾಗೂ ಕಿರುತೆರೆಯಲ್ಲಿ ತಪ್ಪು ಉಚ್ಚಾರಣೆಯನ್ನು ಮನರಂಜನೆಯ ರೂಪದಲ್ಲಿ ಬಿಂಬಿಸಲಾಗುತ್ತಿದೆ. ಪರಭಾಷಿಗರನ್ನು ಕನ್ನಡದಲ್ಲಿ ಮಾತನಾಡಿಸಿ, ಅವರು ವಿಚಿತ್ರವಾಗಿ ಉಚ್ಚರಿಸುವುದನ್ನು ಮನರಂಜನೆಯ ರೂಪದಲ್ಲಿ ಬಿಂಬಿಸುವ ಕಿರುತೆರೆ ಕಾರ್ಯಕ್ರಮವೊಂದು ಸಾಕಷ್ಟು ಜನಪ್ರಿಯವೂ ಆಗಿತ್ತು.

ತಪ್ಪು ಉಚ್ಚಾರಣೆ ಅಥವಾ ತೊದಲುವಿಕೆ ದೋಷವೆಂದು ಭಾವಿಸಬೇಕಾಗಿಲ್ಲ. ಸ್ಪಷ್ಟವಾಗಿ ಮಾತನಾಡುವವರು ಭಾಷೆಯನ್ನು ಚೆನ್ನಾಗಿ ತಿಳಿದಿರುತ್ತಾರೆ ಎನ್ನುವ ಮೇಲರಿಮೆಯೂ ಬೇಕಾಗಿಲ್ಲ. ಭಾಷೆಯೆನ್ನುವುದು ಸಂವಹನದ ಒಂದು ಮಾರ್ಗವೇ ಹೊರತು, ವ್ಯಕ್ತಿತ್ವವನ್ನು ಅಥವಾ ಶ್ರೇಷ್ಠತೆಯನ್ನು ಪ್ರತಿನಿಧಿಸುವ ಮಾರ್ಗ ಅಲ್ಲವೇ ಅಲ್ಲ. ಹಾಗೆ ನೋಡುವುದಾದರೆ, ಮಗುವಿನ ತೊದಲು ನುಡಿಗಿಂತಲೂ ಚೆಲುವಾದ ಭಾಷೆ ಜಗತ್ತಿನಲ್ಲಿ ಎಲ್ಲಿದೆ? ಹಾಗೆಂದು ತಪ್ಪು ಉಚ್ಚಾರಣೆಗಳನ್ನು ನಾವು ಸಹಿಸಿಕೊಳ್ಳಬೇಕಾಗಿಲ್ಲ. ತಿದ್ದುವ ಕೆಲಸವನ್ನು ಎಲ್ಲರೂ ಮಾಡಬೇಕು, ಅದನ್ನು ಮಾಡುವ ಮಾರ್ಗ ಮಾತ್ರ ಪ್ರೇಮ–ಸ್ನೇಹದಿಂದ ಕೂಡಿರಬೇಕು.

ವರ್ತಮಾನದಲ್ಲಿ ಭಾಷೆ ಎದುರಿಸುತ್ತಿರುವ ಬಹುದೊಡ್ಡ ಸವಾಲು ತಪ್ಪು ಉಚ್ಚರಣೆಗೆ ಸಂಬಂಧಿಸಿದ್ದಲ್ಲ. ಆತಂಕ ಇರುವುದು ಭಾಷೆ ಆಯುಧದ ರೂಪದಲ್ಲಿ ಬಳಕೆಯಾಗುತ್ತಿರುವುದರಲ್ಲಿ. ದೊಡ್ಡ ಗಂಟಲಿನ ಕೂಗುಮಾರಿಗಳು ಎದುರಾಳಿಗಳ ಧ್ವನಿಯನ್ನೇ ಹತ್ತಿಕ್ಕುತ್ತಿರುವ ವಿದ್ಯಮಾನಗಳನ್ನು ಕಾಣುತ್ತಿದ್ದೇವೆ. ಯಾರ ಬಗ್ಗೆ ಯಾರು ಏನನ್ನು ಬೇಕಾದರೂ ಮಾತನಾಡಲು ಸಾಧ್ಯವಿರುವ ವರ್ತಮಾನದಲ್ಲಿ, ಭಾಷೆ ತನ್ನ ಆರ್ದ್ರತೆಯನ್ನು, ಸೂಕ್ಷ್ಮ ಸಂವೇದನೆಗಳನ್ನು ಕಳೆದುಕೊಳ್ಳುತ್ತ ಬಡವಾಗುತ್ತಿದೆ, ಜಡವಾಗುತ್ತಿದೆ. ಸಮಾಜಕ್ಕೆ ಮಾದರಿಯಾಗಬೇಕಿದ್ದ ರಾಜಕಾರಣಿಗಳು ಅನಾಗರಿಕ ಭಾಷಾಪ್ರಯೋಗಗಳಲ್ಲಿ ತೊಡಗಿ, ಅದನ್ನೇ ತಮ್ಮ ಸಾಮರ್ಥ್ಯವನ್ನಾಗಿ ಬಿಂಬಿಸಿಕೊಳ್ಳುತ್ತಿರುವ ರಾಜಕೀಯ ಸಂದರ್ಭ ಇಂದಿನದು. ಮಗು ತಪ್ಪಾಗಿ ಮಾತನಾಡುವುದು ಸಹಜ. ಆದರೆ, ಹಿರಿಯರು ಅದರಲ್ಲೂ ನಮ್ಮನ್ನು ಪ್ರತಿನಿಧಿಸುವ ನಾಯಕರು ತಪ್ಪಾಗಿ ಮಾತನಾಡಿದರೆ ಅದು ಅಸಹಜವಷ್ಟೇ ಅಲ್ಲ, ಸಮಾಜದ ಸ್ವಾಸ್ಥ್ಯಕ್ಕೆ ಅಪಾಯಕಾರಿ ಕೂಡ. ಅಂಥ ಅಪಾಯಗಳ ಬಗ್ಗೆ ಮಾತನಾಡುವವರು ಯಾರು? ತಪ್ಪು ಮಾಡಿದ ಶಿಕ್ಷಕನನ್ನು ಸಚಿವರು ಗದರಿಸಿ ಬುದ್ಧಿ ಹೇಳಿದಂತೆ, ಶಾಸಕರನ್ನು ಗದರುವವರು ಯಾರು? ಕೂಗುಮಾರಿಗಳ ಬಗ್ಗೆ ಮೌನವಾಗಿದ್ದು, ಬಡಪಾಯಿ ಶಿಕ್ಷಕನನ್ನು ದಂಡಿಸಿದರೆ ಅದು ಬಲಿಷ್ಟರಿಗಷ್ಟೇ ನ್ಯಾಯ ಎನ್ನುವಂತಾಗುವುದಿಲ್ಲವೇ ಎನ್ನುವ ಪ್ರಶ್ನೆಯನ್ನೂ ನಾವು ಕೇಳಿಕೊಳ್ಳಬೇಕಾಗಿದೆ.

■ **ರಘುನಾಥ ಚ.ಹ.**

ಮಗು ತಪ್ಪಾಗಿ ಮಾತನಾಡುವುದು ಸಹಜ. ಆದರೆ, ಹಿರಿಯರು ಅದರಲ್ಲೂ ನಮ್ಮನ್ನು ಪ್ರತಿನಿಧಿಸುವ ನಾಯಕರು ತಪ್ಪಾಗಿ ಮಾತನಾಡಿದರೆ ಅದು ಅಸಹಜವಷ್ಟೇ ಅಲ್ಲ, ಸಮಾಜದ ಸ್ವಾಸ್ಥ್ಯಕ್ಕೆ ಅಪಾಯಕಾರಿ ಕೂಡ. ಅಂಥ ಅಪಾಯಗಳ ಬಗ್ಗೆ ಮಾತನಾಡುವವರು ಯಾರು?



ಈಶ್ವರ್